# CITIZENS' MANIFESTO FOR
# BENGALURU

Mobility & Infrastructure | Waste management | Governance | Water & Sanitation | Women & Child | Energy

## Year 2023

# ಬೆಂಗಳೂರಿಗೊಂದು ನಾಗರಿಕ ಪ್ರಣಾಳಿಕೆ 2023

*ನಗರ ಸಾರಿಗೆ ಮತ್ತು ಮೂಲಭೂತ ಸೌಕರ್ಯ, ತ್ಯಾಜ್ಯ ನಿರ್ವಹಣೆ, ನಗರ ಆಡಳಿತ, ನೀರು ಮತ್ತು ನೈರ್ಮಲ್ಯ, ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ, ಇಂಧನ*

**ಮುನ್ನುಡಿ:**

ಕರ್ನಾಟಕದ ರಾಜಧಾನಿಯಾದ, ಜಾಗತಿಕವಾಗಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲೊಂದು ಎಂಬ ಕೀರ್ತಿಗೆ ಭಾಜನವಾಗಿ ನಮ್ಮ ಬೆಂಗಳೂರು ರಾಜ್ಯ ಮತ್ತು ರಾಷ್ಟ್ರಗಳೆರಡರ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ನಗರ. ಈ ಅದ್ಭುತ ಬೆಳವಣಿಗೆಗೆ, ರಾಷ್ಟ್ರದ ಮತ್ತು ಜಗತ್ತಿನ ಎಲ್ಲೆಡೆಗಳಿಂದ ವಿವಿಧ ಪ್ರತಿಭೆಗಳನ್ನು ತನ್ನೆಡೆಗೆ ಸೆಳೆಯುತ್ತಿರುವ ಚುಂಬಕ ಶಕ್ತಿ. ಈ ಬಹುವಿಧ ಪ್ರತಿಭೆಗಳ ಸಂಗಮವಾದ ಈ ನಗರದ ವಾತಾವರಣವೇ ಒಂದು ರೀತಿಯಲ್ಲಿ ಜಾಗತಿಕವಾಗಿದ್ದು, ಇದರಿಂದಾಗಿಯೇ ಈ ನಗರಕ್ಕೆ ವಿಶ್ವಮಾನ್ಯತೆ.

ಬೆಂಗಳೂರಿನ ಈ ಕ್ಷಿಪ್ರ ಬೆಳವಣಿಗೆಗೆ, ತನ್ನೊಟ್ಟಿಗೆ ಅದರ ತೊಂದರೆಗಳ ಪಾಲನ್ನು ತಂದೊಡ್ಡಿರುವುದು ವಾಸ್ತವವೇ. ನಾಗರಿಕ ಸೇವೆಗಳಾದ ಚಲನಶೀಲತೆ, ಇಂಧನ, ರಸ್ತೆ, ನೀರು, ಪರಿಸರ ಇತ್ಯಾದಿಗಳ ಬೇಡಿಕೆ ಹೆಚ್ಚಿದಂತೆಲ್ಲ ಪ್ರಸ್ತುತ ಲಭ್ಯವಿರುವ ಮೂಲಸೌಲಭ್ಯಗಳ ಸಾಮರ್ಥ್ಯ ಕುಗ್ಗುತ್ತಲೇ ಇದೆ. ಈ ಮೂಲಸೌಲಭ್ಯಗಳ ಕುರಿತು ನಮಗಿರುವ ಪೂರ್ವಾಗ್ರಹ ಪೀಡಿತ ಕಲ್ಪನೆಗಳನ್ನು ಪುನರ್ವಿಮರ್ಶಿಸಿ ಈ ಸಮಸ್ಯೆಗಳ ಪರಿಹಾರದತ್ತ ಸಕಾರಾತ್ಮಕವಾಗಿ ಯೋಚಿಸಬೇಕಿರುವ ಅವಶ್ಯಕತೆ ನಿರಂತರವಾಗಿದೆ.

ಕರ್ನಾಟಕ ಚುನಾವಣೆಗಳ ಹೊಸ್ತಿಲಲ್ಲಿ ನಿಂತಿದೆ. ಬರುವ 5 ವರ್ಷಗಳಲ್ಲಿ (2023- 2027) ತನ್ನನ್ನು ಆಳುವಂತಹ ರಾಜಕೀಯ ವ್ಯವಸ್ಥೆಯನ್ನು ನಿರೀಕ್ಷಿಸುತ್ತಿದೆ. ಭವಿಷ್ಯದಲ್ಲಿ ಮಾಡಬೇಕಾದುದೇನು? ಅದರ ಪ್ರಾಮುಖ್ಯತೆ ಏನು? ಎಂಬುದರ ಕುರಿತು ಎಲ್ಲಾ ರಾಜಕೀಯ ಪಕ್ಷಗಳು ಹೊರತರುವ ಚುನಾವಣಾ ಪ್ರಣಾಳೀಕೆಗಳು ಈ ವಿಶ್ಲೇಷಣೆಯ ಸಾರ ಸರ್ವಾಂಶವೇ ಆಗಿದೆ. ಬೆಂಗಳೂರು ನಗರ ಮತ್ತು ರಾಜ್ಯವನ್ನು ಕುರಿತಾದ ತಮ್ಮ ದೃಷ್ಟಿಕೋನವನ್ನು ರಾಜಕೀಯ ಪಕ್ಷಗಳು ನಾಗರಿಕರಿಗೆ ತಿಳಿಹೇಳುವ ಕ್ರಮ ಇದಾಗಿದೆ.

ಈ ಹಿನ್ನೆಲೆಯಲ್ಲಿ ಬಿ-ಪ್ಯಾಕ್ ಸಂಸ್ಥೆಯು ನಾಗರಿಕರು ಮತ್ತು ತಜ್ಞರೊಡನೆ ಅನೇಕ ತಿಂಗಳುಗಳು ಸಮಾಲೋಚಿಸಿ ಬೆಂಗಳೂರಿಗೆ ಮುಖ್ಯವಾಗುವ ಅನೇಕ ಸಮಸ್ಯೆಗಳನ್ನು ಗುರುತಿಸುವ ಯತ್ನ ಮಾಡಿದೆ. ಇದರ ಮೊದಲ ಹೆಜ್ಜೆಯೆಂದರೆ ಸರ್ಕಾರ ಕ್ರಮ

ಕೈಗೊಳ್ಳಲೇಬೇಕಿರುವ 5 ಪ್ರಮುಖ ಪ್ರದೇಶಗಳನ್ನು ಗುರುತಿಸುವುದು. ನಾಗರಿಕ ಸಮೀಕ್ಷೆಯೊಂದರ ಪ್ರಕಾರ ಹೀಗೆ ಗುರುತಿಸಲಾದ 5 ಕ್ಷೇತ್ರಗಳೆಂದರೆ **ನಗರಾಡಳಿತ, ನಗರ ಸಾರಿಗೆ ಮತ್ತು ಮೂಲಭೂತ ಸೌಕರ್ಯ, ಘನತ್ಯಾಜ್ಯ ನಿರ್ವಹಣೆ, ನೀರು ಮತ್ತು ನೈರ್ಮಲ್ಯ ಹಾಗೂ ಮಹಿಳೆ ಮತ್ತು ಮಕ್ಕಳ ಸುರಕ್ಷಾ ವಲಯಗಳು.**

ನಂತರದ ಹೆಜ್ಜೆಯಾಗಿ ಬಿ-ಪ್ಯಾಕ್ ಸಂಘಟನೆಯು ಹೇಗೆ ಗುರುತಿಸಲಾದ ಐದೂ ವಲಯಗಳ ತಜ್ಞರೊಂದಿಗೆ ನಿರ್ದಿಷ್ಟವಾದ ಸರಣಿ ಗುಂಪು ಚರ್ಚೆಗಳನ್ನು ಕೈಗೊಂಡಿತು, ಈ ಚರ್ಚೆಗಳ ಫಲಿತಾಂಶಗಳನ್ನು ದಾಖಲಿಸಿ ಇದರ ಜೊತೆಗಿರಿಸಿದೆ. ನಗರದ ಅಗತ್ಯಗಳಿಗೆ ದೀರ್ಘಕಾಲೀನ ಪರಿಹಾರ ಸೂಚಿಸುವ ವಿಸ್ತøತ ಶಿಫಾರಸ್ಸುಗಳ ರೀತಿಯಲ್ಲಿ ಈ ಫಲಿತಗಳಿವೆ. ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಈ ಶಿಫಾರಸ್ಸುಗಳನ್ನು ಸೇರಿಸಿಕೊಳ್ಳಬೇಕೆಂದು ನಮ್ಮ ಸವಿನಯ ಮನವಿ. ಹಾಗಾದಾಗ ನಿಮ್ಮ ಮುಂದಿನ ಕ್ರಮಗÀಳಿಗೆ ಇವು ಆಧಾರವಾಗಬಲ್ಲವು.

ಈ ಪ್ರಯತ್ನಗಳ ಮೂಲಕ ಬಿ-ಪ್ಯಾಕ್ ಸಂಘಟನೆಯು ಜನರನ್ನು ಜನಾಡಳಿತದ ಹತ್ತಿರ ತಂದು ಅವರೂ ಆಡಳಿತದಲ್ಲಿ ಭಾಗಿಯಾಗುಂತೆ ಮಾಡುವ ಕಾಯಕದಲ್ಲಿ ತೊಡಗಿಕೊಂಡಿದೆ. ಹೀಗಾಗಿ ಈ ಶಿಫಾರಸ್ಸುಗಳನ್ನು ನಿಮ್ಮ ಪ್ರಣಾಳಿಕೆಯಲ್ಲಿ ತಾವು ಸೇರಿಸಿಕೊಳ್ಳುವುದಾದರೆ ಅದು ಜನರ ಆಶೋತ್ತರಗಳನ್ನು ಗುರುತಿಸಿ ಪ್ರಸ್ತುತ ರಾಜಕೀಯ ವ್ಯವಸ್ಥೆಯ ಜೊತೆಗೆ ಹೆಚ್ಚಿನ ಧನಾತ್ಮಕ ಸಂವಾದದಲ್ಲಿ ಅವರನ್ನು ತೊಡಗಿಸಿಕೊಂಡಂತಾಗುತ್ತದೆ. ಪ್ರಜಾಪ್ರಭುತ್ವವಾದಿ ನಿಲುವುಗಳನ್ನು ಗಟ್ಟಿಗೊಳಿಸುವ ಈ ಪ್ರಕ್ರಿಯೆಯಿಂದ ಭವಿಷ್ಯದ ದಿನಗಳು ಭವ್ಯವಾಗಲಿವೆ.

ಕರ್ನಾಟಕದಲ್ಲಿ ಮುಂಬರುವ ಚುನಾವಣೆಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವೇದಿಕೆಗಳೆರಡರಲ್ಲೂ ಗಂಭೀರವಾಗಿ ಗಮನಿಸಲಾಗುತ್ತಿದೆ. ಜನಸಾಮಾನ್ಯರ ಆಶೋತ್ತರಗಳೀಗೆ ಸಕಾರಾತ್ಮಕವಾಗಿ ಸ್ಪಂದಿಸುವ ರಾಜಕೀಯ ವುವಸ್ಥೆಗಳು, ನಗರದ ಅಭಿವೃದ್ಧಿಗೆ ಸ್ಪರ್ಧಾತ್ಮಕ ವಾತಾವರಣ ಕಲ್ಪಿಸಬಲ್ಲವಷ್ಟೇ ಅಲ್ಲ, ಅವು ಇಡೀ ದೇಶಕ್ಕೇ ಒಂದು ಸಿದ್ಧಮಾದರಿಯನ್ನೂ ರೂಪಿಸಿಕೊಡಬಲ್ಲವು. ಹೀಗೆ ಮಾಡುವ ಮೂಲಕ ಅಭಿವೃದ್ಧಿ ಪಥದಲ್ಲಿ ಬೆಂಗಳೂರಿನ ಪ್ರಾಮುಖ್ಯತೆಯನ್ನು ಇನ್ನಷ್ಟು ಗಟ್ಟಿಗೊಳಿಸಬಲ್ಲವು. ಸುಸ್ಥಿರವಾಗಿ ಮತ್ತು ಎಲ್ಲರನ್ನೂ ಒಳಗೊಂಡಂತೆ ಬೆಳೆಯುವ / ಬೆಳೆಯಬಹುದಾದ ಸಾಧ್ಯತೆಗಳಿರುವ ನಮ್ಮ ಬೆಂಗಳೂರು ನಮ್ಮೆಲ್ಲರ ಹೆಮ್ಮೆಯಾಗಬಹುದು ಮತ್ತು ನಮ್ಮ ಮುಂದಿನ ಪೀಳಿಗೆಗೆ ನಾವು ನೀಡುವ ಅತ್ಯುತ್ತಮ ಕೊಡುಗೆಯೂ ಆಗಬಹುದು.

ಗೌರವಾದರಗಳೊಂದಿಗೆ,

ಧನ್ಯವಾದಗಳು,

ರೇವತಿ ಅಶೋಕ್

ಗೌ: ವ್ಯವಸ್ಥಾಪಕ ಟ್ರಸ್ಟೀ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ, ಬಿ-ಪ್ಯಾಕ್

**ನಗರಾಡಳಿತ**

- 243 ವಾರ್ಡ್ ಕಾರ್ಪೊರೇಟರುಗಳು ಉಪಮೇಯರ್ ಮತ್ತು ಮೇಯರ್ಗಳನ್ನು ಹೊಂದಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆಗಳನ್ನು ನಡೆಸುವುದು.
- ಸಾಂಸ್ಥಿಕ ಸುಧಾರಣೆಗಳು: ರಾಜ್ಯವಿಧಾನಸಭೆಗಳಿಗೆ ಮತ್ತು ಲೋಕಸಭೆಗೆ ಚುನಾವಣೆಗಳನ್ನು ನಡೆಸಿ, ನಿರ್ದಿಷ್ಟ ಸಮಯಾವಧಿಯನ್ನು ನಿರ್ಧರಿಸಿ ನಿಗದಿಪಡಿಸುವ ಭಾರತದ ಮುಖ್ಯಚುನಾವಣಾ ಆಯೋಗ(ಇ.ಸಿ.ಐ) ಮಾದರಿಯಲ್ಲಿಯೂ ರಾಜ್ಯದಲ್ಲಿ ಬಿಬಿಎಂಪಿ ಮತ್ತು ಇತರ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಅಧಿಕಾರ ನೀಡುವುದು.
- ಚುನಾವಣಾ ಪ್ರಕ್ರಿಯೆ ಎಲ್ಲಾ ಅಧಿಕಾರವನ್ನೂ ರಾಜ್ಯ ಸರ್ಕಾರದಿಂದ ರಾಜ್ಯ ಚುನಾವಣಾ ಆಯೋಗಕ್ಕೆ ಹಸ್ತಾಂತರಿಸಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸುವುದು. ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಯಾವುದೇ ಚುನಾವಣೆಯಲ್ಲೂ ರಾಜ್ಯ ಸರ್ಕಾರದ ಯಾವ ಪಾತ್ರವೂ, ಹಸ್ತಕ್ಷೇಪವೂ ಇರಬಾರದು.
- ಕರ್ನಾಟಕ ಆಡಳಿತ ಸುಧಾರಣಾ ಆಯೋಗ ತನ್ನ ಮೂರನೇ ವರದಿಯಲ್ಲಿ ( https://bit.ly/3TO6EtH ) ಯುಡಿಡಿ, ಬಿಬಿಎಂಪಿ, ಬಿಡಿಎ( ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ಬಿಎಂಆರ್ಡಿಎ, ಬೆಂಗಳೂರು ಮೆಟ್ರೋ ರೀಜನ್ ಡೆವೆಲಪ್‌ಮೆಂಟ್ ಅಥಾರಿಟಿ) ಬೆಂಗಳೂರು ಒಳಚರಂಟಿ ಮತ್ತು ನೀರು ಸರಬರಾಜು ಮಂಡಳಿ) { ಪುಟ 119 ರಿಂದ 179} ಮತ್ತು ವಿಶೇಷ ವರದಿ ಬಿಬಿಎಂಪಿಯ ಸುಧಾರಣೆ ಮತ್ತು ಪುನರ್ ರಚನೆ (**https://bit.ly/3TM1uOU)** ಗಳಿಗಾಗಿ ನೀಡಿರುವ ಶಿಫಾರಸುಗಳನ್ನು ಎತ್ತಿ ಹಿಡಿದಿದೆ. ಈ ಶಿಫಾರಸುಗಳು ಆಯೋಗವು ಆಯ್ದ ಸರ್ಕಾರಿ ಇಲಾಖೆಗಳ ಅಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ವಿವಿಧ ಸ್ತರಗಳಿಂದ ಆರಿಸಲಾದ ವಿವಿಧ ಹಂತದ ಅಧಿಕಾರಗಳೊಂದಿಗೆ ನಡೆಸಿದ ಅನೇಕ ಸಂವಾದಗಳು ಮತ್ತು ಕ್ಷೇತ್ರ ಭೇಟಿಯ ಫಲವಾಗಿ ಪಡೆದ ಅನುಭವದ ಆಧಾರದ ಮೇಲೆ ರೂಪಿತಗೊಂಡಿವೆ. ಬರುವ 16 ನೇಯ ವಿಧಾನಸಭೆಯಲ್ಲಿ ( 2023-2027) ಕೈಗೊಳ್ಳುವ ಕ್ರಮಗಳಲ್ಲಿ ಈ ಶೀಪಾರಸ್ಸುಗಳನ್ನು ಅನ್ವಯಗೊಳಿಸುವ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳು ಕಾರ್ಯನಿರ್ವಹಿಸಬೇಕು.
- ಬೆಂಗಳೂರು ಮಹಾನಗರ ಪಾಳಿಕೆ ಸ್ವಂತ ಸಿಬ್ಬಂದಿ ಸಂಖ್ಯೆಯನ್ನು ವಲಸೆ (ನಿಯೋಜಿತ) ಸಿಬ್ಬಂದಿಯ ರೀತಿಯಲ್ಲಿಯೇ ಹೆಚ್ಚಿಸಬೇಕು.
  - ಕಂದಾಯ ವಿಭಾಗ (21 % ಸಿಬ್ಬಂದಿ) ಆಸ್ತಿ ತೆರಿಗೆಯ ಗಣನೆ ಮತ್ತು ಸಂಗ್ರಹವನ್ನು ಹೆಚ್ಚಿಸಲು ಎನ್ ಫೋರ್ಸ್ ಮೆಂಟ್ ಸೆಲ್ – (ಜಾರಿ ಕೋಶ) ಒಂದರ ರಚನೆ.
  - ಇಂಜಿನಿಯರಿಂಗ್ ವಿಭಾಗ: ಶೇ 41 ರಷ್ಟು ಸಿಬ್ಬಂದಿ) ವಾರ್ಡ್ ಮಟ್ಟದಲ್ಲಿ ರಸ್ತೆ ಗುಂಡಿಗಳು, ಪಾದಚಾರಿ ಮಾರ್ಗ, ಒಳಚರಂಡಿಗಳುವಾರ್ಡ್‌ನ ರಸ್ತೆಗಳು ಮೊದಲಾದವುಗಳ ಕುರಿತು ಜನರು ನೀಡುವ ದೂರುಗಳನ್ನು ಪರಿಶೀಲಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ವಾರ್ಡ್‌ಗಳಲ್ಲಿನ ಇಂಜಿನಿಯರಿಂಗ್ ಸಿಬ್ಬಂದಿ- ತಾಂತ್ರಿಕ ಸಿಬ್ಬಂದಿ- ಸಂಖ್ಯೆಯನ್ನು ಬಲಪಡಿಸುವ ತೀವ್ರ ಅಗತ್ಯವಿದೆ.

- ಸಾರ್ವಜನಿಕ ಆರೋಗ್ಯ ವಿಭಾಗ (ಶೇ 16.9 ಸಿಬ್ಬಂದಿ) ಪ್ರತಿ ವಾರ್ಡಿಗೂ ಒಬ್ಬ ಜೆಹೆಚ್‌ಇ ( ಜೂನಿಯರ್ ಹೆಲ್ತ್ ಇನ್‌ಸ್‌ಪೆಕ್‌ಟ್‌ರ್) ಮತ್ತು ಪ್ರತಿ 2 ವಾರ್ಡಿಗೆ ಒಬ್ಬ ಎಸ್‌ಹೆಚ್‌ಡಿ ( ಸೇನಿಯರ್ ಹೆಲ್ತ್ ಇನ್‌ಸ್‌ಪೆಕ್ಟರ್) ನೇಮಕ ಮಾಡಬೇಕೆಂದು ಶಿಫಾರಸ್ಸು ಮಾಡಲಾಗಿದೆ.
- ಕಾನೂನು ಕೋಶ (ಶೇ 7.3 ಸಿಬ್ಬಂದಿ) ಪ್ರಾರಂಭಿಕ ಹಂತದಲ್ಲಿ ಪ್ರತಿ ಜೋನಲ್ ಕಚೇರಿಯಲ್ಲೂ ಒಂದು ಜೋನಲ್ ಲೀಗಲ್ ಸಎಲ್ ವಲಯ ಕಾನೂನು ಕೋಶ ಇರಬೇಕೆಂದು ಶಿಫಾರಸ್ಸು ಮಾಡಲಾಗಿದೆ.

- ಬೆಂಗಳೂರು ನಗರ ಪಾಲಿಕೆಯ ವಿಭಾಗಗಳಲ್ಲಿ ಪ್ರಸ್ತುತ ಮಂಜೂರಾಗಿರುವ ಆದರೆ ಖಾಲಿ ಇರುವ ಹುದ್ದೆಗಳಿಗೆ ಸಿಬ್ಬಂದಿ ನೇಮಕ ಮಾಡಿಕೊಳ್ಳುವಂತೆ ಶಿಫಾರಸ್ಸು ಮಾಡಲಾಗಿದೆ. ಕೆ.ಎ.ಎಸ್ ಗ್ರೂಪ್ ಎ ಶ್ರೇಣಿಯಿರುವಂತೆ ಬಿಬಿಎಂಪಿಯಲ್ಲಿ ಕೂಡ ನೇರ ನೇಮಕಗೊಂಡ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವುದು.
- ಬಿಬಿಎಂಪಿಯ ಎಲ್ಲಾ 243 ವಾರ್ಡುಗಳಲ್ಲಿರುವ ಆಸ್ತಿಗಳ ಖಾತೆಗಳೊಂದಿಗೆ ಆಸ್ತಿಯ ಮಾಲೀಕರ ಛಾಯಾಚಿತ್ರಗಳನ್ನು ಜೊತೆ ಮಾಡುವುದು. ಇದರಿಂದಾಗಿ ಆಸ್ತಿ ಮಾಲೀಕತ್ವದ ವಿಚಾರದಲ್ಲಿ ಹೆಚ್ಚಿನ ಪಾರದರ್ಶಕತೆ ಸಾಧಿಸಲು ಸಾಧ್ಯವಾಗುವುದು.
- ಬಿಡಿಎ ಮತ್ತು ಬಿಎಂಆರ್ಡಿಎ ವಿಲೀನ
- ಬಿಡಿಎ ಮತ್ತು ಬಿಎಂಆರ್ಡಿಎ ಕಾಯ್ದೆಯ ತಿದ್ದುಪಡೆಉ ಮೂಲಕ ಬಿಎಂಆರ್ಡಿಎ ಯನ್ನು ವಿಲೀನಗೊಳಿಸುವುದು. ವಿಲೀನಗೊಂಡ ಈ ಘಟಕವು ಬಿಡಿಎ ಮತ್ತು ಬಿಎಂಆರ್ ಡಿಎ ಎರಡೂ ಸಂಸ್ಥೆಗಳ ಬಲವನ್ನು ಹೊಂದಿರುತ್ತದೆ. ಇದರಿಂದಾಗಿ ಬೆಂಗಳೂರು ಮೆಟ್ರೋಪಾಲಿಟನ್ ವಲಯದ ಅಭಿವೃದ್ಧಿಯ ಯೋಜನೆ ಮತ್ತು ಅಭಿವೃದ್ಧಿಯ ಕೆಲಸಗಳೆರಡಕ್ಕೂ ವೇಗ ದೊರೆಯುವುದು.

**ಚಲನಶೀಲತೆ ಮತ್ತು ಮೂಲಭೂತ ಸೌಲಭ್ಯ**

Mobility & Infrastructure

- ಬೆಂಗಳೂರು ಮೆಟ್ರೋಪಾಲಿಟನ್ ಭೂ ಸಾರಿಗೆ - ಬೆಂಗಳೂರು ಮೆಟ್ರೋಪಾಲಿಟನ್ ಟ್ರಾನ್ಸ್‌ಪೋರ್ಟ್ ಅಥಾರಿಟಿ (ಬಿಎಂಎಲ್‌ಟಿಎ) ರಚನೆಗಾಗಿ 100 ಕೋಟಿ ರೂ.ಗಳ ಇಡಗಂಟು ನೀಡಿಕೆ. ನೂರು ದಿನಗಳಲ್ಲಿ ಬಿಎಂಎಲ್‌ಟಿಎ ಕಾನೂನು ಜಾರಿ. ಸಮಗ್ರವಾದ ಹಾಗೂ ಸುಸ್ಥಿರ ಸಾರಿಗೆ ವ್ಯವಸ್ಥೆಯ ಜ್ಞಾನವಿರುವ, ತಾಂತ್ರಿಕ ಮತ್ತು ಯೋಜನಾ ಪರಿಣಿತಿಯಿರುವ ಸಿಬ್ಬಂದಿಯನ್ನು ಮಾತ್ರ ಬಿಎಂಎಲ್‌ಟಿಎ ನಲ್ಲಿ ನೇಮಕ ಮಾಡಿಕೊಳ್ಳಬೇಕು. ಬಿಎಂಎಲ್‌ಟಿಎ ಸಂಸ್ಥೆ ಪ್ರಯಾಣಿಕ ಸ್ನೇಹಿ ಬಹುವಿಧದ ಸಾರಿಗೆ ವ್ಯವಸ್ಥೆಯನ್ನೂ ರೂಪಿಸುವ ಅಧಿಕಾರ ಹೊಂದಿರಬೇಕು. ಸಾರ್ವಜನಿಕ ಸಾರಿಗೆಯ ಪ್ರತಿ ವಿಧಕ್ಕೂ ಅನುರೂಪವಾದ ಆಯವ್ಯಯ ರೂಪಿಸಿ ಅದನ್ನು ಕಾರ್ಯಗತಗೊಳಿಸುವ ಅಧಿಕಾರವಿರುವ ಏಕೈಕ ಸಂಸ್ಥೆ ಬಿಎಂಟಿಎಲ್ಎ ಆಗಬೇಕು.
- ಪ್ರಸ್ತುತ ಸಾರ್ವಜನಿಕ ಸಾರಿಗೆಯ ಸಾಮರ್ಥ್ಯ ಶೇ 47. ಇದನ್ನು 2028 ರ ವೇಳೆಗೆ ಶೇ 80 ಕ್ಕೆ ಏರಿಸುವಂತಾಗಬೇಕು.
- ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಗಾತ್ರ ಮತ್ತು ವ್ಯಾಪ್ತಿಯನ್ನು ಅನುಸರಿಸಿ, ಪ್ರತಿ ಯೋಜನೆಯೂ ಕನಿಷ್ಠ 3 ರಿಂದ 5 ಸಾರ್ವಜನಿಕ ಸಂವಹನಾ ಪ್ರಕ್ರಿಯೆಗೊಳಪಡಬೇಕು.
- ಸಾರ್ವಜನಿಕ ಸಾರಿಗೆಯ ಪ್ರತಿವಿಧದಲ್ಲೂ ಪ್ರಯಾಣಿಕರ ಪ್ರಯಾಣ ಸಮಯ ಉಳಿಸಿ ಸೇವೆಯನ್ನು ಉತ್ತಮಗೊಳಿಸಲು, ಸಾರಿಗೆ ವ್ಯವಸ್ಥೆ ಪೂರೈಕೆದಾರರಿಗೆ ನುರಿತ ತಾಂತ್ರಿಕ- ಸದಸ್ಯರು- ಸಲಹೆಗಾರರನ್ನೇ ನೇಮಕ ಮಾಡಬೇಕು.

- ಪಾಲು ಪಡೆಯುವ ಕ್ಯಾಬ್‌ಗಳು, ಆಟೋಗಳು ಮತ್ತು ಬೈಕ್ ಸೇವೆಗಳು ಕಾನೂನಾತ್ಮಕ ಒಂದೇ ಸರಣಿಯಲ್ಲಿ ಬರುವಂತೆ ಮತ್ತು ಈ ಸಾಧ್ಯತೆ ಈಗ ಲಭ್ಯವಿರುವ ಕಾಂಟ್ರಾಕ್ಟ್ ಕ್ಯಾರೇಜ್- ಒಪ್ಪಂದದ ಮೇರೆಗೆ ಪರವಾನಗಿಗಳ ವ್ಯಾಪ್ತಿಯಲ್ಲಿಯೇ ದೊರಕುವಂತೆ ಮಾಡಬೇಕು.

**ರಸ್ತೆ ಮತ್ತು ಮೂಲಸೌಲಭ್ಯ**

- 20*40 ಅಡಿಯ ಸಾರ್ವತ್ರಿಕ ವಿನ್ಯಾಸದ ರಸ್ತೆಗಳನ್ನು ತಜ್ಞರು ರೂಪಿಸಿ ಸಿದ್ಧಪಡಿಸಬೇಕು.
- ಕೈಗೊಂಡ ಎಲ್ಲಾ ರಸ್ತೆ ಅಭಿವೃದ್ಧಿ - ಸುಧಾರಣೆ ಯೋಜನೆಗಳ ತನಿಖಾ ವರದಿಗಳನ್ನೂ ಸೂಕ್ತವೇದಿಕೆಯಲ್ಲಿ ತಪ್ಪದೇ ಪ್ರಕಟಿಸಬೇಕು.

**ಸಾರ್ವಜನಿಕ ಸಾರಿಗೆ**

- ವಿವಿಧ ರೀತಿಯ ಗ್ರಾಹಕರಿಗೆ ಸಮೂಹ ಕ್ಷಿಪ್ರ ಸಾರಿಗೆ ಸೇವೆಗಳು ಕೈಗೆಟಕುವಂತೆ ಆಕರ್ಷಕ ದರದಲ್ಲಿರುವಂತೆ, ಲಭ್ಯವಿರುವಂತೆ ಮತ್ತು ಸುಲಭವಾಗಿ ಸಿಗಬಲ್ಲಂತೆ ಮಾಡುವ ವ್ಯವಸ್ಥೆಯಾಗಬೇಕು.
- ಎಲ್ಲ ಮೆಟ್ರೋ ಸ್ಟೇಷನ್‌ಗಳಲ್ಲಿ ಪಾರ್ಕಿಂಗ್ ಸೌಲಭ್ಯ ದೊರೆಯುವಂತಾಗಬೇಕು.
- ನಗರದಲ್ಲಿರುವ ಎಲ್ಲಾ ಮೆಟ್ರೋ ಸ್ಟೇಷನ್‌ಗಳಿಗೂ ಫೀಡರ್ ಬಸ್ ಹಾಗೂ ಇ-ರಿಕ್ಷಾ ಸೇವೆ ದೊರೆಯುವಂತೆ ಸೇವೆಗಳನ್ನು ಸಮನ್ವಯಗೊಳಿಸಬೇಕು.
- ಯಾವುದೇ ಸಾರಿಗೆ ವ್ಯವಸ್ಥೆಯಲ್ಲಿ ಬಳಸಬಹುದಾದ ಸಾಮಾನ್ಯ ಮೊಬಿಲಿಟಿ ಕಾರ್ಡ್ ಗಳನ್ನು ಪರಿಚಯಿಸಬೇಕು
- ಮುಂದೆ ಖರೀದಿಸಲ್ಪಡುವ ಎಲ್ಲಾ ಖಾಸಗಿ ವಾಹನಗಳಿಗೂ ಬೆಂಗಳೂರು ಸೆಸ್ ತೆರಿಗೆ ವಿಧಿಸಬೇಕು. ಈ ತೆರಿಗೆಯನ್ನು ಸುಸ್ಥಿರ ಸಾರಿಗೆ ಅಭಿವೃದ್ಧಿಗಾಗಿ, ಪಾದಚಾರಿ ಮತ್ತು ಸೈಕ್ಲಿಂಗ್ ಹಾದಿಗಳ ನಿರ್ಮಾಣಕ್ಕೆ ಬಳಸಬೇಕು.

**ಬಿಎಂಟಿಸಿ- ಬೆಂಗಳೂರು ಮಹಾನಗರ ಸಾರಿಗೆ**

- ಪ್ರಸ್ತುತ ಲಭ್ಯವಿರುವ 6673 ಬಸ್‌ಗಳ ಸಂಖ್ಯೆಯನ್ನು 2028ರ ಒಳಗೆ 16,000 ಬಸ್‌ಗಳ ಸಾಮಥ್ರ್ಯಕ್ಕೆ ವೃದ್ಧಿಸಬೇಕು
- ಸಾರಿಗೆ ವ್ಯವಸ್ಥೆ ನೀಡುವ ಸೇವೆಯಲ್ಲವೂ ಪ್ರಯಾಣಿಕ ಸ್ನೇಹಿಯಾಗಿರಬೇಕು. ಪ್ರಯಾಣಿಕರು ಸೇವೆಯನ್ನು ಸರಿಯಾಗಿ ಪಡೆದುಕೊಳ್ಳಲು ಅನುವಾಗುವಂತೆ, ವಿವಿಧ ದರಗಳ ವಿವರ, ಪಾವತಿ ವಿಧಾನ ಮೊದಲಾದವುಗಳನ್ನು ತಂತ್ರಜ್ಞಾನ ಬಳಸಿ ಒಮ್ಮೆಲೇ ದೊರೆಯುವಂತೆ ಮಾಡಬೇಕು.
- ಬೇಡಿಕೆ, ರಸ್ತೆಯ ಸ್ಥಿತಿಗತಿ, ಪ್ರದೇಶದ ಭೂ ಸ್ಥಿತಿಗಳನು ಗಮನದಲ್ಲಿರಿಸಿಕೊಂಡು ವಿವಿಧ ಸೂಕ್ತ ರೀತಿಯ ಬಸ್‌ಗಳನ್ನು ಬಳಸಬೇಕು.
- ಅತಿ ಮುಖ್ಯ ಬಸ್ ರೂಟ್‌ಗಳೊಂದಿಗೆ ಸಂಪರ್ಕ ಸಾಧಿಸುವ ನಗರದೊಳಣ ಪ್ರದೇಶದಿಂದ ಸಂಚರಿಸುವ ಫೀಡರ್ ಬಸ್‌ಗಳ ಸೇವೆಯನ್ನು ಆದ್ಯತೆಯ ಮೇರೆಗೆ ನೀಡಬೇಕು.
- ಪ್ರತಿ ವರ್ಷ ಶೇ 20 ರಂತೆ ಬಿಎಂಟಿಸಿಯು 2030 ರ ಒಳಗೆ ತನ್ನ ಎಲ್ಲಾ ಬಸ್‌ಗಳನ್ನು ಎಲೆಕ್ಟ್ರಿಕ್ ವಾಹನಗಳಾಗಿ ಬದಲಾಯಿಸಬೇಕು.
- ಬೆಂಗಳೂರಿನಲ್ಲಿ ಅತಿ ಹೆಚ್ಚು ಸಾರಿಗೆ ದಟ್ಟಣೆಯಿರುವ 12 ಕಾರಿಡಾರ್ಗಳಲ್ಲಿ ಬಿಎಂಟಿಸಿ ಬಸ್‌ಗಳಿಗೆಂದೇ ನಿರ್ದಿಷ್ಟ ರಸ್ತೆಗಳಿರಬೇಕು.

- ಬಸ್‌ಗಳ ಸಂಚಾರ ಅವಧಿಯನ್ನು ಗಣನೀಯವಾಗಿ ಹೆಚ್ಚಿಸಿ, ಆಯಾ ಬಸ್ ಲೇನ್‌ಗಳಲ್ಲಿ ಪ್ರಯಾಣಿಕರನ್ನು ಸಾಗಿಸುವ ಸಾಮರ್ಥ್ಯ ಹೆಚ್ಚಾಗುವಂತೆ ನೋಡಿಕೊಳ್ಳಬೇಕು.

**ನಮ್ಮ ಮೆಟ್ರೋ**

- 2030 ನೇ ವರ್ಷದ ವೇಳೆಗೆ ಬೆಂಗಳೂರಿನಲ್ಲಿ ಮೆಟ್ರೋ ಟ್ರೇನ್ ಲೇನ್‌ಗಳ ಉದ್ದ 1000 ಕಿಮಿ ಗಳಾಗುವಂತಾಗಬೇಕು

**ಉಪನಗರ ರೈಲು**

- ಬರುವ 5 ವರ್ಷಗಳಲ್ಲಿ ಉಪನಗರ ರೈಲು ವ್ಯವಸ್ಥೆಯ ನಾಲ್ಕು ಕಾಡಿಡಾರ್ ಗಳಲ್ಲಿ 148 ಕಿಮೀ ಉದ್ದದ ರೈಲು ಮಾರ್ಗ ನರ್ಮಾಣ ಪೂರ್ಣವಾಗಬೇಕು. ಎಲ್ಲಾ ನಾಲ್ಕು ಉಪನಗರ ರೈಲು ನಿರ್ಮಾಣ ಪೂರ್ಣವಾಗಬೇಕು. ಎಲ್ಲಾ ನಾಲ್ಕು ಉಪನಗರ ರೈಲು ಕಾಡಿಡಾರ್ಗಳಲ್ಲಿಯೂ ಕಾಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳಬೇಕು ಪ್ರಕಟಣೆಗಾಗಿ ಒಂದು ವರ್ಷವಾಗುತ್ತ ಬಂದರೂ ಇಲ್ಲಿಯವರೆಗಿನ ಪ್ರಗತಿ ನಗಣ್ಯ ಎಂದೇ ಹೇಳಬಹುದು.
- ಈಗಿರುವ ರೈಲು ಸೌಲಭ್ಯವನ್ನೇ ಕ್ಷಿಪ್ರ ಫಲಿತಗಳಾಗಿ ಬಳಸಬೇಕು
    - ವಿಮಾನನಿಲ್ದಾಣಕ್ಕೆ ರೈಲು ಸಂಪರ್ಕ ವ್ಯವಸ್ಥೆಯ ವಿಶ್ವಾಸಾರ್ಹತೆ ಮತ್ತು ಅವಧಿಯನ್ನು ಹೆಚ್ಚಿಸಬೇಕು.
    - ಈಗ ಪ್ರಸ್ತುತ 3 ಕಾರಿಡಾರುಗಳಲ್ಲಿ 4 ಮೆಮು ಟ್ರೇನುಗಳು ಓಡಾಡುತ್ತಿವೆ ( 1. ಸಿಟಿಯಿಂದ ಯಶವಂತಪುರ ಮೂಲಕ ಯಲಹಂಕದ ವರೆಗೆ, 2. ಬೈಯಪ್ಪನಹಳ್ಳಿಯ ಮೂಲಕ ಸಿಟಿಯಿಂ ಯಲಹಂಕದವರೆಗೆ. 3. ಏರ್ಪೋರ್ಟ್ ದೇವನಹಳ್ಳಿಯ ಮೂಲಕ ಸಿಟಿಯಿಂದ ಯಲಹಂಕದವರೆಗೆ) ಈ ಮಾರ್ಗಗಳನ್ನು ಅತಿ ಶೀಘ್ರವಾಗಿ ಅನುಷ್ಠಾನಗೊಳಿಸಬೇಕಿದೆ.

**ಆಟೋ ರಿಕ್ಷಾ**

- ಬರುವ ವರ್ಷಗಳಲ್ಲಿ ಎಲ್ಲಾ ಆಟೋ ರಿಕ್ಷಾಗಳನ್ನು ಎಲೆಕ್ಟ್ರಿಕ್ ವಾಹನಗಳಾಗಿ ಪರಿವರ್ತಿಸುವುದು.
- ಈಗಿರುವ ಆಟೋಗಳನ್ನು ಎಲೆಕ್ಟ್ರಿಕ್ ಆಟೋಗಳಾಗಿ ಪರಿವರ್ತಿಸಲು ಹಾಗೂ ಹೊಸ ಎಲೆಕ್ಟ್ರಿಕ್ ಆಟೋಗಳನ್ನು ಖರೀದಿಸಲು ಪ್ರೋತ್ಸಾಹಧನ ನೀಡುವುದು.
- ನಗರದಲ್ಲಿ 50,000 ಎಲೆಕ್ಟ್ರಿಕ್ ಆಟೋ ಪರ್ಮಿಟ್‌ಗಳನ್ನು ನೀಡುವುದು.

**ಕೊನೆ ಮೈಲು ಸಂಪರ್ಕ**

- ಯಾವೊಬ್ಬ ನಾಗರಿಕನೂ ಸಾರ್ವಜನಿಕ ಸಾರಿಗೆ ಸಂಪರ್ಕ ಪಡೆಯಲು 5000 ಮೀಗಳಿಗಿಂತ ಹೆಚ್ಚು ದೂರು ನಡೆಯದಂತಹ ಸ್ಥಿತಿ ಕಲ್ಪಿಸುವುದು.
- ಕೊನೆ ಮೈಲು ಸಂಪರ್ಕ ಸಾಧಿಸಲು ಸಾಧ್ಯವಾಗುವಂತ ಸಾರಿಗೆ ಪರಿಕರಗಳಾದ ಸೈಕಲ್, ಇ-ಬೈಕ್ ಗಳು, ಶೇರ್ ಮಾಡುವ ಆಟೋಗಳು ಮೊದಲಾದ ವ್ಯವಸ್ಥೆಗಳು ಸಾರ್ವಜನಿಕ ಸಾರಿಗೆ ಜಂಕ್ಷನುಗಳಿಂದ ಹತ್ತಿರದ ಸಾರಿಗೆ ಗಮ್ಯಗಳಾದ ಟೆಕ್ ಪಾರ್ಕುಗಳು, ಮಾರುಕಟ್ಟೆ, ಮಾಲ್‌ಗಳು, ಕಚೇರಿ ಸಮುಚ್ಚಯಗಳು, ಶೈಕ್ಷಣಿಕ ಸಂಸ್ಥೆಗಳನ್ನು ಸಲುಭವಾಗಿ ತಲುಪಲು ಲಭ್ಯವಿರುವಂತಹ ಸ್ಥಿತಿ ನಿರ್ಮಾಣವಾಗಬೇಕು.

**ಪಾದಚಾರಿ ಸುರಕ್ಷೆ**

- ಪಾದಚಾರಿಗಳು ಸುರಕ್ಷಿತವಾಗಿ ನಡೆಯಬಲ್ಲಂತಹ, ಅವರಿಗೆ ಸುಲಭವಾಗಿ ಎಟುಕಬಲ್ಲಂತಹ 1500 ಉದ್ದದ ಪಾದಚಾರಿ ಮಾರ್ಗವನ್ನು ನಗರದಾದ್ಯಂತ ನಿರ್ಮಿಸಬೇಕು. ಎಲ್ಲಿ ಮೆಟ್ರೋ ನಿಲ್ದಾಣ/ ಬಸ್ ನಿಲ್ದಾಣ/ ರೈಲು ನಿಲ್ದಾಣಗಳ ಸುತ್ತ ಒಂದು ಕಿಮೀ ವ್ಯಾಪ್ತಿಯಲ್ಲಿ ಸೂಕ್ತ ಪಾದಚಾರಿ ಮಾರ್ಗ ಮತ್ತು ಜೀಬ್ರಾ ಕ್ರಾಸಿಂಗ್‌ಗಳನ್ನು ನಿರ್ಮಿಸಬೇಕು ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ ಬೀದಿಬದಿ ವ್ಯಾಪಾರಿಗಳಿರುವ ರಸ್ತೆಗಳನ್ನು ಯೋಜಿಸಬೇಕು.

**ಎಲೆಕ್ಟ್ರಿಕ್ ಸಾರಿಗೆ - ಪಾರ್ಕಿಂಗ್ ಮತ್ತಿತರ ಸಂಗತಿಗಳು**

- ಪಾರ್ಕಿಂಗ್ ಇಲ್ಲದ - ನೋ ಪಾರ್ಕಿಂಗ್ ಮತ್ತು ಪಾವತಿಸಿ ಪಾರ್ಕ್ ಮಾಡುವ - ಪೇಯ್ಡ್ ಪಾರ್ಕಿಂಗ್ ಪ್ರದೇಶಗಳನ್ನು ನಿರ್ದಿಷ್ಟವಾಗಿ ಗುರುತಿಸಬೇಕು ಮತ್ತು ಕಟ್ಟುನಿಟ್ಟಾಗಿ ಪಾರ್ಕಿಂಗ್ ನಿಯಮಗಳನ್ನು ಪಾಲಿಸುವಂತಾಗಬೇಕು.
- ನಗರದ ಹೃದಯಭಾಗದ ಮತ್ತು ಇತರ ಭಾಗಗಳ ರಸ್ತೆಗಳಲ್ಲಿ ರೇಡಿಯೋ ಟ್ಯಾಕ್ಸಿ/ ಆಟೋ ರಿಕ್ಷಾ ಮೊದಲಾದ ಸೇವೆಗಳಿಗೆ ಅನುವಾಗುವಂತೆ ನಿರ್ದಿಷ್ಟ ಪಾರ್ಕ್ ಮತ್ತು ಪಿಕಪ್‌ಸ್ಥಳಗಳನ್ನು ಗುರುತಿಸಬೇಕು. ಅಥವಾ ಈ ಬಗೆಯ ವ್ಯವಸ್ಥೆಯೊಂದನ್ನು ಪರಿಚಯಿಸಬೇಕು.
- ಎಲೆಕ್ಟ್ರಿಕ್ ವಾಹನಗಳ ಪಾರ್ಕಿಂಗ್ ನಿಯಮಗಳನ್ನು ಅನುಷ್ಠಾನಗೊಳಿಸಬೇಕು. ಎಲೆಕ್ಟ್ರಿಕಲ್/ ಎಲೆಕ್ಟ್ರಿಕ್ ವಾಹನಗಳಿಗೆ ಪಾರ್ಕಿಂಗ್ ಶುಲ್ಕದಿಂದ ನಿನಾಯಿತಿ ನೀಡಬೇಕು.
- ಬೆಂಗಳೂರು ನಗರಕ್ಕೆ ವಾರ್ಷಿಕ ಎಲೆಕ್ಟ್ರಿಕಲ್ ವಾಹನಗಳ ಗುರಿಯನ್ನು ನಿಗದಿಪಡಿಸಬೇಕು, ಅಥವಾ ಕ್ಷಿಪ್ರ, ಮಧ್ಯಮ ಮತ್ತು ದೀರ್ಘಾವಧಿಗುರಿಗಳನ್ನಾದರೂ ಪ್ರಚಾರಪಡಿಸುವಂತಾಗಬೇಕು.
- ಬೆಂಗಳೂರಿನಲ್ಲಿ ಎಲೆಕ್ಟ್ರಿಕಲ್ ವಾಹನ ಖರೀದಿ/ಉಪಯೋಗದ ಪ್ರಗತಿಯನ್ನು ನಿಯಮಿತವಾಗಿ ವರದಿ ಮಾಡುವ ' ಇವಿ ಡ್ಯಾಶ್ ಬೋರ್ಡ್- ಎಲೆಕಟ್ರಿಕ್ ವಾಹನ ಸೂಚನಾಫಲಕ ಸ್ಥಾಪಿಸಬೇಕು.
- ಕಡಿಮೆ ಪ್ರಮಾಣದ ಮಾಲಿನ್ಯ ಪ್ರದೇಶಗಳನ್ನು ರಚಿಸಬೇಕು.
- ಬೆಂಗಳೂರಿನಲ್ಲಿ ಎಲ್ಲಾ ಹಸ ಸರ್ಕಾರಿ ವಾಹನಗಳೂ ಎಲೆಕ್ಟ್ರಿಕ್ ವಾಹನಗಳಾಗಿರಬೇಕು.
- 2028 ರ ವೇಳೆಗೆ ನಗರದ ಎಲ್ಲಾ ಸರ್ಕಾರಿ ವಾಹನ ನಿಲುಗಡೆ ಪ್ರದೇಶಗಳ ಶೇ 80 ರಷ್ಟು ಪ್ರದೇಶಗಳನ್ನಾದರೂ ಎಲೆಕ್ಟ್ರಿಕ್ ವಾಹನಗಳ ಪಾರ್ಕಿಂಗ್/ ಚಾರ್ಜಿಂಗ್ ಪ್ರದೇಶವನ್ನಾಗಿ ಪರಿವರ್ತಿಸಬೇಕು.
- ನಗರ ಅಭಿವೃದ್ಧಿ ಯೋಜನೆಯ ಶಾಶ್ವತ ಭಾಗವಾನ್ನಾಗಿ ಎಲೆಕ್ಟ್ರಿಕ್ ಚಲನಶೀಲ ಯೋಜನೆಯನ್ನು ಸಮ್ಮಿಲಗೊಳಿಸಬೇಕು.
- ತಮ್ಮದೇ ಆದ ಖಾಸಗಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಅಳವಡಿಸಬಲ್ಲ ವಸತಿ ಪ್ರದೇಶಗಳ ಮಾಲೀಕರಿಗೆ ಆಸ್ತಿ ತೆರಿಗೆಯಲ್ಲಿ ವಿನಾಯ್ತಿ ನೀಡುವ ವ್ಯವಸ್ಥೆಯಾಗಬೇಕು.
- ಎಲೆಕ್ಟ್ರಿಕ್ ನ ಮೊದಲ ಮತ್ತು ಕೊನೆಯ ಮೈಲು ಸಂಪರ್ಕ ಮತ್ತು ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕು.

Water & Sanitation

## ನೀರು- ತ್ಯಾಜ್ಯ ನೀರು ಮತ್ತು ನೈರ್ಮಲ್ಯ

### ಸಾಂಸ್ಥಿಕ ಸುಧಾರಣೆ ಮತ್ತು ಆಡಳಿತ

- ನೀರಿನ ಎಲ್ಲಾ ಆಕರÀಗಳನ್ನೂ ಅಂದರೆ ಮೇಲ್ಮೈ ನೀರು, ಭೂಗರ್ಭದ ನೀರು, ತ್ಯಾಜ್ಯ ನೀರು ಪ್ರವಾಹ ನೀರು ಎಲ್ಲವನ್ನೂ ಒಟ್ಟುಗೂಡಿಸಿ, ಇವೆಲ್ಲವನ್ನೂ ಒಂದೇ ಒಂದು ಪ್ರಾಧಿಕಾರ ನಿರ್ವಹಿಸಿ ನೋಡಿಕೊಳ್ಳುವಂತೆ ಮಾಡಬೇಕು. ಇದರಿಂದಾಗಿ ಬೆಂಗಳೂರಿಗೆ ಒಂದು ನಿರಂತರ ನೀರು ಸರಬರಾಜು ದೊರೆಯುವಂತಾಗಲಿದೆ.
- ನೀರು ಸರಬರಾಜು/ ವಿರಣೆಯ ಜವಾಬ್ದಾರಿ ಹೊತ್ತಿರುವ ವಿವಿಧ ಏಜೆನ್ಸಿ/ ಸಂಸ್ಥೆಗಳ ನಡುವೆ ಸೂಕ್ತ ಸಮನ್ವಯ ಸಾಧಿಸಿ, ಸರಿಯಾದ ಯೋಜನೆಗಳನ್ನು ರೂಪಿಸುವ ಜವಾಬ್ದಾರಿ ಇರುವ ಒಂದೇ ಕೇಂದ್ರ ಪ್ರಾಧಿಕಾರವನ್ನು ಸ್ಥಾಪಿಸಬೇಕು. ಈ ಪ್ರಾಧಿಕಾರ ಇಡೀ ಬೆಂಗಳೂರು ಮೆಟ್ರೋ ವಲಯದ, ಅಂತರ್ಜಲ ಮರುಪೂರಣ ಮತ್ತು ಅದನ್ನು ಹೊರತೆಗೆದು ವಿತರಿಸುವ ಕೆಲಸವನ್ನು ಮಾಡಬೇಕು.
- ಈ ಪ್ರಾಧಿಕಾರವನ್ನು ಮುನ್ನಡೆಸಲು ತಜ್ಞರು, ಚುನಾಯಿತ ಪ್ರತಿನಿಧಿಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ನಾಮನಿರ್ದೇಶಿತರಾದ ಸದಸ್ಯರನ್ನು ಒಳಗೊಂಡ ಒಂದು ಮಂಡಳಿ ಇರಬೇಕು
- ಈ ಮೇಲಿನ ವ್ಯವಸ್ಥೆಯ ಸಂರಚಣೆ ಮತ್ತು ನಿರ್ವಹಣೆಯನ್ನು ನಿಯಂತ್ರಿಸುವ ಮತ್ತು ದೀರ್ಘಾವಧಿ ಯೋಜನೆಗಳನ್ನು ರೂಪಿಸ ಸೇವಾದರಗಳನ್ನು ನಿಗದಿ ಮಾಡಬಲ್ಲಂತಹ ರೆಗ್ಯುಲೇಟರಿ/ನಿಯಂತ್ರಕ ಪ್ರಾಧಿಕಾರವೊಂದನ್ನು ರಚಿಸಬೇಕು.
- ಬೆಂಗಳೂರನ್ನು ನೀರು- ಸೂಕ್ಷ್ಮ ಪ್ರದೇಶ: ವಾಟರ್ ಸೆನ್ಸಿಟಿವ್ ಸಿಟಿ ಎಂದು ಘೋಷಿಸಿ ಅದರ ನಾಗರಿಕರು ನೀರನ್ನು ವಿವೇಕಯುತವಾಗಿ ಬಳಸುವಂತೆ ಪ್ರೋತ್ಸಾಹಿಸಬೇಕು.
- ಅನಧಿಕೃತ ಮತ್ತು ನೊಂದಣಿಯಾಗದ ಕೊಳವೆಬಾವಿಗಳನ್ನು ಗುರುತಿಸಿ, ಅದರ ಮಾಲೀಕರುಗಳಿಗೆ ಸೂಕ್ತ ದಂಡವಿಧಿಸಿ ಅವುಗಳನ್ನು ಕೂಡಲೇ ಬಂದ್ ಮಾಡುವ ಕ್ರಮವಾಗಬೇಕು.

### ನೀರು ಪೂರೈಕೆ

- ಪ್ರತಿ ನಾಗರಿಕರಿಗೂ ಸಮಾನವಾಗಿ ನೀರು ಪೂರೈಸುವುದು. ಎಲ್ಲಾ ನಾಗರಿಕರಿಗೂ 90 ಎಲ್ ಪಿಸಿಡಿ ಯಷ್ಟು ನೀರನ್ನು ಸೂಕ್ತ ದರದಲ್ಲಿ ಪೂರೈಸುವುದು. ಬಿಪಿಎಲ್ ಕಾರ್ಡುದಾರರಿಗೆ ಮಾತ್ರ ಉಚಿತವಾಗಿ ನೀರು ಪೂರೈಸುವುದು. ಮಿಕ್ಕೆಲ್ಲರಿಗೂ ನೀರಿನ ದರ ಒಂದೇ ತೆÉರನಾಗಿರಬೇಕು.
- ಮಳೆನೀರು, ಕೆರೆಕಟ್ಟೆಗಳ ನೀರು ಮತ್ತು ಮರುಬಳಕೆಗೆ ಯೋಗ್ಯವಾಗುವಂತೆ ಪರಿವರ್ತಿಸಿದ ನೀರಿನ ಮೂಲಗಳನ್ನು ಶೋಧಿಸಿ ಪೂರೈಕೆ ಮಟ್ಟಕ್ಕೆ ಬಲ ತುಂಬಬೇಕು
- ಸಂಸ್ಕರಿಸಿದ ತ್ಯಾಜ್ಯ ನೀರಿನ ನಿರ್ವಹಣೆಗೆ ಪ್ರಥಮಾದ್ಯತೆ ನೀಡಬೇಕು.
- ತೋಟಗಾರಿಕೆ ಮತ್ತು ಭೂ ವಿನ್ಯಾಸ ಕೆಲಗಳಿಗೆ ಎಲ್ಲಾ ಬಿಡಿಎ/ ಬಿಬಿಎಂಪಿ ಪಾರ್ಕುಗಳು ಮತ್ತು ಸಾಂಸ್ಥಿಕ ಹಸಿರು ಪ್ರದೇಶಗಳು ಮರುಬಳಕೆಗೆ ಯೋಗ್ಯವಾಗುವಂತೆ ಪರಿರ್ತಿಸಿದ ನೀರನ್ನೇ ಬಳಸಬೇಕು ಎನ್ನುವುದನ್ನು ಕಡ್ಡಾಯಗೊಳಿಸಬೇಕು.

## ನೀರು ವಿತರಣಾ ನಷ್ಟಗಳು

- ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್ಎಸ್ಬಿ) ಯ ವರದಿಯಂತೆ ಆದಾಯ ತಾರದ ನೀರಿನ ಪ್ರಮಾಣ ಶೇ. 30 ರಷ್ಟು ಬೆಂಗಳೂರು ಇಷ್ಟು ಅಗಾಧ ಪ್ರಮಾಣದ ನೀರು ನಷ್ಟವನ್ನು ಭರಿಸಲಾರದು. ನೀರು ನಷ್ಟದ ಈ ಪ್ರಮಾಣವನ್ನು ಶೇ. 10 ರಿಂದ ಶೇ 20ರ ಒಳಗಾದರೂ ತರಲೇಬೇಕು. ಇದರಿಂದಾಗಿ ಹೊಸ ಬಡಾವಣೆಗಳಿಗೆ ನೀರು ಪೂರೈಸುವುದು ಸಾಧ್ಯವಾಗುತ್ತದೆ. ಹೇಗೆ ಆಗುತ್ತಿರುವ ನಷ್ಟದ ಪ್ರಮಾಣ ಸರಿ ಸುಮಾರು 290 ಮಿಲಿಯನ್ ಲೀಟರ್ ಪ್ರತಿದಿನ. ಈ ನೀರನ್ನೇನೂ ನಾವು ಉಚಿತವಾಗಿ ಪಡೆಯುತ್ತಿಲ್ಲ. ಈ ಮಟ್ಟಿಗೆ ಇದು ಜಲಮಂಡಳಿಗೆ ಪ್ರತಿನಿತ್ಯದ ಆದಾಯ ನಷ್ಟವೇ
- ಅತ್ಯುಚ್ಚ ಗುಣಮಟ್ಟದ ನೀರು ಪೂರೈಕೆ/ವಿತರಣಾ ಪರಿಕರಗಳನ್ನು ಪ್ರತಿ ಮನೆಗೂ ಅಳವಡಿಸುವ ಪ್ರಯತ್ನವನ್ನು ಪರಿಚಯಿಸಬೇಕು. ಇದರಿಂದಾಗಿ ಶೇ. 15 ರಿಂದ ಶೇ 20 ರಷ್ಟು ನೀರು ಪೋಲಾಗುವುದನ್ನು ತಡೆಯಬಹುದು. ಈ ತರಹೆಯ ಅತ್ಯಾಧುನಿಕ ಉಪಕರಣಗಳನ್ನು ಈಗಾಗಲೇ ಜನ ಬಳಸುತ್ತಿದ್ದರೆ. ಅಂತಹವರಿಗೆ ಜಲಮಂಡಳಿ ಪ್ರೋತ್ಸಾಹ ನೀಡಬೇಕು.
- ಗ್ಲೋಬಲ್ ಇನ್ಫರ್ಮೇಷನ್ ಸಿಸ್ಟಂ- ಜಾಗತಿಕ ಮಾಹಿತಿ ನೀರು ವಿತರಣಾ ವ್ಯವಸ್ಥೆಯನ್ನು ಆಟೋಮೇಡೆಡ್ - ಸ್ವಯಂಚಾಲಿತಗೊಳಿಸಿ- ಅದನ್ನು ನಿಯಂತ್ರಿಸಬಹುದು.